# ಟ್ವೆಂಟಿ–20 ಬೌಲರ್‌ಗಳಿಗೆ ಅಗ್ನಿಪರೀಕ್ಷೆ

**ಸಾಂಪ್ರದಾಯಿಕ ಬೌಲರ್‌ಗಳ ಎಲ್ಲ ಅಸ್ತ್ರಗಳಿಗೂ ಬ್ಯಾಟರ್‌ಗಳು ಉತ್ತರ ಕಂಡುಕೊಂಡಿದ್ದಾರೆ. ಮುಂದೇನು?**

**■ ವಿಶಾಖ ಎನ್.**



ಲೆಕ್ಕಾಚಾರ ಫಲಿಸಿದ ಖುಷಿಯಲ್ಲಿ ಕುಲದೀಪ್ ಮತ್ತು ಅಕ್ಷರ್. ಫೋಟೊ: ಪ್ರಶಾಂತ್ ಎಚ್.ಜಿ.

ಬಿ.ಎಸ್. ಚಂದ್ರಶೇಖರ್ ಸ್ಪಿನ್ ಬೌಲರ್ ಆದರೂ ಇಂಗ್ಲೆಂಡ್ ನೆಲದಲ್ಲಿ ಬೌನ್ಸರ್ ಹಾಕಬಲ್ಲ ಚತುರರಾಗಿದ್ದವರು. ಚುಟುಕು ಕ್ರಿಕೆಟ್ ಶುರುವಾಗುತ್ತದೆ ಎಂಬ ಸೊಲ್ಲು ಕ್ಷೀಣವಾಗಿ ಕೇಳುತ್ತಿದ್ದ ಹೊತ್ತಿನಲ್ಲೇ ಅವರು 'ಅದು ಕ್ರಿಕೆಟ್ ಅಲ್ಲ' ಎಂದು ಟೀಕೆ ಮಾಡಿದ್ದರು. ಈಗ 'ಐಪಿಎಲ್' ಕ್ರಿಕೆಟ್‌ನಲ್ಲಿ ಬರೀ ಬ್ಯಾಟ್ಸ್‌ಮನ್‌ಗಳ ವಿಜೃಂಭಣೆ ಕಂಡರೆ ಅವರು ಹಾಗೆ ಹೇಳಿದ್ದು ಯಾಕೆ ಎನ್ನುವುದು ಅರ್ಥವಾದೀತು.

ಇದೇ ಮೊದಲ ಬಾರಿಗೆ ಸ್ಪರ್ಧಾತ್ಮಕ ಕ್ರಿಕೆಟ್ ಆಡುವ ಅವಕಾಶ ಪಡೆದಿರುವ ಚಿಕ್ಕ ವಯಸ್ಸಿನ ಹುಡುಗರೂ ನಿರ್ದಾಕ್ಷಿಣ್ಯವಾಗಿ ಚೆಂಡನ್ನು ಬೌಂಡರಿ ಗೆರೆ ದಾಟಿಸುವ ರೋಮಾಂಚನವನ್ನು ಬಹುತೇಕರು ಸುಖಿಸುತ್ತ ಇರುವ ಹೊತ್ತು ಇದು. ಬೌಲರ್‌ಗಳಿಗೆ ಇದು ನಿಜಕ್ಕೂ ಅಗ್ನಿಪರೀಕ್ಷೆಯ ಕಾಲ. ಬ್ಯಾಟ್ಸ್‌ಮನ್ ರನ್ ಹೊಡೆಯದಂತೆ ಮಾಡಲು ಎಂಥ ಎಸೆತ ಹಾಕಬೇಕೆನ್ನುವ ಗುಂಗಿಹುಳ ತಲೆ ಕೊರೆಯುತ್ತಲೇ ಇರುತ್ತದೆ.

ವಕಾರ್ ಯೂನಸ್, ವಸೀಮ್ ಅಕ್ರಮ್ ಅವರಂತಹ, ಪಾಕಿಸ್ತಾನ ತಂಡದ ದಿಗ್ಗಜ ಬೌಲರ್‌ಗಳು ಯಾರ್ಕರ್ ಪ್ರಯೋಗಿಸಿ, ವೇಗದ ಬೌಲಿಂಗ್ ಘನತೆ ಹೆಚ್ಚಿಸಿದ್ದವರು. ವಿಕೆಟ್ ಬುಡಕ್ಕೆ ನೇರವಾಗಿ ಚೆಂಡು ಬಡಿದು, ಬ್ಯಾಟ್ಸ್‌ಮನ್ ಕಂಗಾಲಾಗುವಂತೆ ಮಾಡುತ್ತಿದ್ದ ಯಾರ್ಕರ್ ಹಾಕುವುದರಲ್ಲಿ ವೇಗದ ಬೌಲರ್ ಪಳಗಿದರೆ, ಅದು ಆಯ್ಕೆಯ ಮಾನದಂಡಕ್ಕೆ ಒಂದು ಅಂಶ ಸೇರ್ಪಡೆ ಆದಂತೆಯೇ ಸರಿ ಎನ್ನುವ ಸಂದರ್ಭ. ಮುಂದೆ ಅದೇ ಶೈಲಿಯಲ್ಲಿ ಒಂದಿಷ್ಟು ಮಾರ್ಪಾಡು ಮಾಡಿಕೊಂಡು ಬೌಲಿಂಗ್ ಮಾಡುವ ಸ್ಲಿಂಗ್ ಶೈಲಿಯನ್ನು ಶ್ರೀಲಂಕಾದ ಲಸಿತ್ ಮಾಲಿಂಗ ತಂದರು. ಅವರ ಶೈಲಿ ನಿಗೂಢವೂ ಆಗಿದ್ದುದರಿಂದ ಬ್ಯಾಟ್ಸ್‌ಮನ್‌ಗಳು ಅಳುಕುತ್ತಲೇ ಅವರ ಎಸೆತಗಳನ್ನು ಆಡುತ್ತಿದ್ದರು. ಈಗ ಯಾರ್ಕರ್ ಹಾಕಲು ದಿಗ್ಗಜ ವೇಗದ ಬೌಲರ್‌ಗಳೂ ಹೆದರುತ್ತಿದ್ದಾರೆ. ಬ್ಯಾಟ್ಸ್‌ಮನ್ ಮುಂದಕ್ಕೆ ಚೆಂಡು ಬಿದ್ದರೆ ಅದು, ಓವರ್ ಪಿಚ್ ಆಗಿ ಬಿಡುತ್ತದೆ ಎನ್ನುವುದು ಆ ಆತಂಕಕ್ಕೆ ಕಾರಣ. ಗುಡ್ ಲೆನ್ತ್ ಎಸೆತವು ಸವಕಲು ಎಂದು ಯಾವತ್ತೋ ಬ್ಯಾಟ್ಸ್‌ಮನ್‌ಗಳು ಮಾಡಿದ್ದಾಗಿದೆ. ಮುನ್ನುಗ್ಗಿ ಆಡುವ ಮೂಲಕ ಅಂತಹ ಎಸೆತವನ್ನೂ ದಂಡಿಸುವ ಪಾದಚಲನೆಯ ನಿಸ್ಸೀಮರು ಇದ್ದಾರೆ.

ಶಾರ್ಟ್ ಪಿಚ್ ಅಥವಾ ಬೌನ್ಸರ್‌ಗಳಿಂದ ಕಟ್ಟಿಹಾಕೋಣ ಎಂದುಕೊಂಡರೆ, ಹುಕ್–ಪುಲ್ ಪರಿಣತರ ಸಂಖ್ಯೆ ಏರುತ್ತಲೇ ಇದೆ. ಬೌನ್ಸರ್ ಅನ್ನು ವಿಕೆಟ್ ಕೀಪರ್ ತಲೆ ಮೇಲೆ ತಳ್ಳುವ ರಿಸ್ಕ್ ತೆಗೆದುಕೊಳ್ಳಲು ಈಗ ಬಾಲಂಗೋಚಿ ಬ್ಯಾಟ್ಸ್‌ಮನ್‌ಗಳೂ ಹಿಂದೇಟು ಹಾಕುವುದಿಲ್ಲ.

ನಾಲ್ಕನೇ ಸ್ಟಂಪ್ ದಿಕ್ಕಿನತ್ತ ಗುರಿ ಮಾಡಿ ಎಸೆತ ಹಾಕುವುದು ರನ್ ನಿಯಂತ್ರಣಕ್ಕೆ ಎಡೆಮಾಡಿಕೊಡುತ್ತದೆ. ಜೊತೆಗೆ, ಬ್ಯಾಟ್ ಅಂಚಿಗೆ ಚೆಂಡು ತಾಕಿ, ವಿಕೆಟ್ ಕೀಪರ್ ಕೈಗೆ ಚೆಂಡು ಸೇರುವ ಸಾಧ್ಯತೆಯೂ ಇರುತ್ತದೆ ಎಂದು ಕೋಚ್‌ಗಳು ಹೇಳಿಕೊಡುವುದು ಹಳೆಯ ಕ್ರಿಕೆಟ್ ವ್ಯಾಕರಣದ ಭಾಗ ಆಗಿತ್ತು. ಈಗ ಅದನ್ನು ಡ್ರೈವ್ ಮಾಡುವುದರಲ್ಲೂ ಹೊಸ ವರಸೆಯನ್ನು ನೋಡುತ್ತಿದ್ದೇವೆ. 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ತಂಡದ ನಾಯಕ ರಜತ್ ಪಾಟೀದಾರ್ ಅಪ್ಪಿಶ್ ಆಗಿ ಆಡುವ ವಿಲಕ್ಷಣ ಹೊಡೆತವೊಂದನ್ನು ಈ ಬಾರಿಯ ಐಪಿಎಲ್‌ನಲ್ಲಿ ಪದೇ ಪದೇ ಆಡುತ್ತಿದ್ದಾರೆ. ಅಲ್ಲಿಗೆ ಸಾಂಪ್ರದಾಯಿಕ ಎನ್ನುವ ಬೌಲರ್‌ಗಳ ಎಲ್ಲ ಅಸ್ತ್ರಗಳಿಗೂ ಉತ್ತರವನ್ನು ಬ್ಯಾಟರ್‌ಗಳು ಕಂಡುಕೊಂಡಿದ್ದಾರೆ ಎಂದಾಯಿತು.

ಗುಜರಾತ್ ಟೈಟಾನ್ಸ್ ಮತ್ತು ಪಂಜಾಬ್ ಕಿಂಗ್ಸ್ ಪಂದ್ಯದಲ್ಲಿ, ಕರ್ನಾಟಕದ ವೈಶಾಖ್ ವಿಜಯಕುಮಾರ್ ಬೌಲಿಂಗ್ ಮಾಡಲು ಬಂದರು. ಇನ್ನೇನು ವೈಡ್ ಆಗಬಹುದಾದ ಗೆರೆಯ ಪಕ್ಕವನ್ನೇ ಕೇಂದ್ರೀಕರಿಸಿಕೊಂಡು ಬೌಲಿಂಗ್ ಮಾಡಲು ಆರಂಭಿಸಿದರು. ಆ ಪಂದ್ಯದಲ್ಲಿ ಅವರು ಐದು ವೈಡ್ ಹಾಕಿದ್ದೇನೋ ನಿಜ. ಆದರೆ, ತಂಡವು 11 ರನ್‌ಗಳ ಅಂತರದಿಂದ ಗೆದ್ದಿದ್ದು ಅವರು ಪ್ರಯೋಗಿಸಿದ ಆ ತಂತ್ರದಿಂದಲೇ. ಅಂತಹ ತಂತ್ರ ಅಳವಡಿಸಿಕೊಳ್ಳಲು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪತಿರಾಣಾ, ಲಖನೌ ಸೂಪರ್ ಜೈಂಟ್ಸ್ ತಂಡದ ಶಾರ್ದೂಲ್ ಠಾಕೂರ್ ಇನ್ನಿಲ್ಲದಂತೆ ಯತ್ನಿಸುತ್ತಿದ್ದಾರೆ. ಶಾರ್ದೂಲ್ ಅವರಂತೂ ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ಕೊಲ್ಕತ್ತ ನೈಟ್ ರೈಡರ್ಸ್ ವಿರುದ್ಧದ ಪಂದ್ಯದಲ್ಲಿ ಸತತ ಐದು ವೈಡ್ ಹಾಕಿ, ಹೊಸ ದಾಖಲೆ ನಿರ್ಮಿಸಿದರು. ಆ ಪಂದ್ಯದಲ್ಲಿ ಒಟ್ಟು 15 ವೈಡ್‌ಗಳು ತಮ್ಮ ತಂಡದಿಂದ ಬರಲು ಶಾರ್ದೂಲ್ ಕಾರಣರಾದರು. (ಅದು ಕೂಡ ತಂಡದ ದಾಖಲೆಯೇ).

ಇದುವರೆಗೆ ಐಪಿಎಲ್‌ನಲ್ಲಿ ಯಾರೂ ಸತತವಾಗಿ ಐದು ವೈಡ್ ಹಾಕಿರಲಿಲ್ಲ. 2015ರಲ್ಲಿ ಬೂಮ್ರಾ, 2017ರಲ್ಲಿ ಪ್ರವೀಣ್ ಕುಮಾರ್, 2023ರಲ್ಲಿ ಮೊಹಮ್ಮದ್ ಸಿರಾಜ್, ಕಳೆದ ವರ್ಷ ಖಲೀಲ್ ಅಹಮದ್ ಸತತವಾಗಿ ನಾಲ್ಕು ವೈಡ್ ಹಾಕಿದ್ದು ಇದುವರೆಗಿನ ಐಪಿಎಲ್ ದಾಖಲೆ.

ಎಸೆತದ ವೇಗ ವೈವಿಧ್ಯದಿಂದ ಕಂಗೆಡಿಸುವ ಚಾಲಾಕಿತನದ ಜೊತೆಗೆ ವೈಡ್‌ಗೆ ಅತಿ ಹತ್ತಿರದ ಎಸೆತಗಳನ್ನು ಹಾಕಿ, ಬ್ಯಾಟರ್‌ಗಳ ಕಾಡುವ ಹೊಸ ವರಸೆ ಯಾರಿಗೆ ಹೆಚ್ಚು ಒಲಿಯುವುದೋ, ನೋಡಬೇಕು.

ಪ್ರತಿಕ್ರಿಯಿಸಿ: feedback@sudha.co.in